## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** | **1150** |
| **ವಿಧಾನ ಪರಿಷತ್ತಿನ ಸದಸ್ಯರ ಹೆಸರು** | **ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ:** | **13-03-2026** |
| **ಉತ್ತರಿಸುವವರು:** | **ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು** |
| ***ಪ್ರಶ್ನೆ*** | ***ಉತ್ತರ*** |
| **ಅ)** ರಾಜ್ಯದಲ್ಲಿ ಇ-ಜನ್ಮ ಪೋರ್ಟಲ್ ಮೂಲಕ ಜನನ-ಮರಣ ನೋಂದಣಿಯನ್ನು ಕಡ್ಡಾಯಗೊಳಿಸಿದ್ದು ಪ್ರತಿ ನೋಂದಣಿಗೆ ಪಾವತಿಸಬೇಕಿರುವ ಶುಲ್ಕ ಮತ್ತು ವಿಳಂಬಿತ ನೋಂದಣಿಗೆ ಪಾವತಿಸಬೇಕಿರುವ ದಂಡ ಶುಲ್ಕ ಎಷ್ಟು; | ರಾಜ್ಯದಲ್ಲಿ ಜನನ, ಮರಣ ನೋಂದಣಿಯನ್ನು ಭಾರತ ಸರ್ಕಾರದ 1969 (ತಿದ್ದುಪಡಿ 2024) ನೇ ಅಧಿನಿಯಮ ಹಾಗೂ ಕರ್ನಾಟಕ ರಾಜ್ಯ ಜನನ, ಮರಣಗಳ ನೋಂದಣಿ ನಿಯಮಗಳು 1999 (ತಿದ್ದುಪಡಿ 2024) ರ ಪ್ರಕಾರ ರಾಜ್ಯಾದ್ಯಾಂತ ಜನನ, ಮರಣ ನೋಂದಣಿಯನ್ನು ಮಾಡಲಾಗುತ್ತಿದೆ. ಜನನ, ಮರಣ ನೋಂದಣಿ ನಿಯಮಗಳು 1999 (ತಿದ್ದುಪಡಿ 2024) ರಡಿ ಕೆಳಕಂಡಂತೆ ಜನನ, ಮರಣ ನೋಂದಣಿಗೆ ಸಂಬಂಧಿಸಿದಂತೆ ವಿವಿಧ ಪ್ರಕಾರ್ಯಗಳಿಗೆ ಶುಲ್ಕವನ್ನು ನಿಗಧಿಪಡಿಸಲಾಗಿದೆ. |

| **ಅಧಿನಿಯಮದ ಪ್ರಕರಣ/ನಿಯಮ** | **ವಿವರಗಳು** | **ಶುಲ್ಕ** |
|---|---|---|
| ಅಧಿನಿಯಮದ ಪ್ರಕರಣ 12 ಹಾಗೂ ನಿಯಮ 8 (1) | ಜನನ ಅಥವಾ ಮರಣ ಘಟನೆ ಸಂಭವಿಸಿದ 21 ದಿನಗಳೊಳಗಾಗಿ ನೋಂದಣಿ ಮಾಡಿದ್ದಲ್ಲಿ ಒಂದು ಪ್ರಮಾಣ ಪತ್ರವನ್ನು ಉಚಿತವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ. | ಉಚಿತ |
| ನಿಯಮ 9 (1) | ಜನನ ಅಥವಾ ಮರಣ ಘಟನೆ ಸಂಭವಿಸಿದ 21 ದಿನಗಳ ನಂತರ ಹಾಗೂ 30 ದಿನಗೊಳಗಾಗಿ ತಡ ನೋಂದಣಿ ಮಾಡಲು | ರೂ. 20.00 |
| ನಿಯಮ 9 (2) | ಜನನ ಅಥವಾ ಮರಣ ಘಟನೆ ಸಂಭವಿಸಿದ 30 ದಿನಗಳ ನಂತರ ಹಾಗೂ ಒಂದು ವರ್ಷದೊಳಗಾಗಿ ತಡ ನೋಂದಣಿ ಮಾಡಲು (ತಹಶೀಲ್ದಾರರ/ನಗರ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರ ಆದೇಶ ಪಡೆದು) | ರೂ. 50.00 |
| ನಿಯಮ 9 (3) | ಜನನ ಅಥವಾ ಮರಣ ಘಟನೆ ಸಂಭವಿಸಿದ ಒಂದು ವರ್ಷದ ನಂತರ ನೋಂದಣಿ ಮಾಡಲು (ಘನ ನ್ಯಾಯಾಲಯದ ಆದೇಶ ಪಡೆದು) | ರೂ. 10.00 |

| | |
|---|---|
| **ಆ)** ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಗ್ರಾಮಗಳ ಮ್ಯಾಪಿಂಗ್ (ಗ್ರಾಮ ಪಂಚಾಯಿತಿ ಗ್ರಾಮಗಳ ಹೆಸರು ಬದಲಾವಣೆ ಆಗಿರುವುದು ಗ್ರಾಮಗಳ ಹೆಸರು ಬಿಟ್ಟು ಹೋಗಿರುವುದು ಇತ್ಯಾದಿ) ನ್ಯೂನ್ಯತೆಯಿದ್ದು ತಹಶೀಲ್ದಾರ್ ಕಛೇರಿಗೆ ತಡ ನೋಂದಣಿಗಾಗಿ ವರ್ಗಾವಣೆ ಆಗುತ್ತಿರುವ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ. ಈ ಸಮಸ್ಯೆಯನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ಕಳೆದ ಏಳು ವರ್ಷಗಳಿಂದ ಕೇಂದ್ರ ಸರ್ಕಾರದ Local Government Directory ಮತ್ತು ಇ-ಗ್ರಾಮ ಸ್ವರಾಜ್ ತಂತ್ರಾಂಶಗಳನ್ನು ಗ್ರಾಮ ಪಂಚಾಯತಿಗಳಲ್ಲಿ ಬಳಸಲಾಗುತ್ತಿದೆ. ಸದರಿ ತಂತ್ರಾಂಶಗಳಲ್ಲಿ ಕಂದಾಯ ಗ್ರಾಮಗಳನ್ನು ಮಾತ್ರ ಅಳವಡಿಸಲಾಗಿದೆ. ಅದರಂತೆ, Local Government Directory ಯಲ್ಲಿರುವ ಗ್ರಾಮ ಪಂಚಾಯತಿ ಮತ್ತು ಗ್ರಾಮಗಳ ವಿವರಗಳನ್ನು ಇ-ಜನ್ಮ ತಂತ್ರಾಂಶದಲ್ಲಿ ಬಳಸಲಾಗುತ್ತಿದೆ.<br>Local Government Directory ಯಲ್ಲಿ ಗ್ರಾಮಗಳ ಸೇರ್ಪಡೆ ಕಾರ್ಯವನ್ನು ಕಂದಾಯ ಇಲಾಖೆಯು ನಿರ್ವಹಿಸುತ್ತದೆ. ಸದರಿ ಸೇರ್ಪಡೆ ಮಾಡಲಾಗುವ ಗ್ರಾಮಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ಮ್ಯಾಪ್ ಮಾಡುವ ಕಾರ್ಯವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ನಿರ್ವಹಿಸಲಾಗುತ್ತಿದೆ.<br>ಅದರಂತೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ಗ್ರಾಮ ಪಂಚಾಯತಿಗಳ ಹೆಸರು ಬದಲಾವಣೆ ಆಗಿರುವ ಪ್ರಸ್ತಾವನೆಗಳನ್ನು ಪರಿಶೀಲನೆಗಾಗಿ, ಸಂಬಂಧಿಸಿದ ಜಿಲ್ಲೆಗಳಿಗೆ ಕಳುಹಿಸಲಾಗಿದ್ದು, ಮ್ಯಾಪಿಂಗ್ ಮಾಡಲು ಕ್ರಮವಹಿಸಲಾಗುತ್ತಿದೆ. |
| **ಇ)** ಇಂತಹ ಪ್ರಕರಣಗಳಲ್ಲಿ ವಿಳಂಬಿತ ನೋಂದಣಿಗೆ ದಂಡ ಶುಲ್ಕದಿಂದ ಸಾರ್ವಜನಿಕರಿಗೆ ವಿನಾಯಿತಿ ಇದೆಯೇ; (ವಿವರ ನೀಡುವುದು). | ವಿಳಂಬ ನೋಂದಣಿ ಆಗಿರುವ ಕುರಿತಂತೆ ಯಾವುದೇ ಪ್ರಸ್ತಾವನೆಗಳು ಸ್ವೀಕೃತಿಯಾಗಿರುವುದಿಲ್ಲ. |
| **ಈ)** ಮಂಡ್ಯ ಜಿಲ್ಲೆಯ ನಾಗಮಂಗಲ, ಕೆ.ಆರ್ ಪೇಟೆ, ಪಾಂಡವಪುರ ತಾಲ್ಲೂಕುಗಳಲ್ಲಿ ಈ ರೀತಿಯ ಪ್ರಕರಣಗಳ ಹೆಚ್ಚಾಗಿದ್ದು, ಇದೇ ರೀತಿ ಇತರೆ ಜಿಲ್ಲೆಗಳಲ್ಲೂ ಸಮಸ್ಯೆಯಿರುವುದನ್ನು ಸರಿಪಡಿಸುವ ನಿಟ್ಟಿನಲ್ಲಿ ಈವರೆವಿಗೂ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಈ ಸಮಸ್ಯೆಗೆ ಯಾವ ಕಾಲಮಿತಿಯಲ್ಲಿ ಪರಿಹಾರ ದೊರಕಿಸಲಾಗುವುದು? (ಸಂಪೂರ್ಣ ವಿವರ ನೀಡುವುದು) | ಮಂಡ್ಯ ಜಿಲ್ಲೆಯ ನಾಗಮಂಗಲ, ಕೆ.ಆರ್.ಪೇಟೆ ಮತ್ತು ಪಾಂಡವಪುರ ತಾಲ್ಲೂಕುಗಳಲ್ಲಿರುವ 85 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಸುಮಾರು 835 ಗ್ರಾಮಗಳ ಪೈಕಿ 835 ಗ್ರಾಮಗಳಿಗೆ LGD Code ಸರಿ ಇದ್ದು, ಇ-ಜನ್ಮ ತಂತ್ರಾಂಶಕ್ಕೆ ಮ್ಯಾಪಿಂಗ್ ಆಗಿರುತ್ತದೆ.<br>ಇದೇ ರೀತಿ ಇತರೆ ಜಿಲ್ಲೆಗಳಲ್ಲಿಂದ ಸ್ವೀಕೃತಿಯಾಗಿರುವ ಗ್ರಾಮ ಪಂಚಾಯತಿಗಳ ಹೆಸರು ಬದಲಾವಣೆ ಆಗಿರುವ ಪ್ರಸ್ತಾವನೆಗಳನ್ನು ಪರಿಶೀಲನೆಗಾಗಿ, ಸಂಬಂಧಿಸಿದ ಜಿಲ್ಲೆಗಳಿಗೆ ಕಳುಹಿಸಲಾಗಿದ್ದು, ತುರ್ತಾಗಿ ಮ್ಯಾಪಿಂಗ್ ಮಾಡಲು ಕ್ರಮವಹಿಸಲಾಗುತ್ತಿದೆ. |

**ಪಿಡಿಎಸ್ 47 ಎಸ್‌ಎಸ್‌ಎಂ 2026**

(ಡಿ. ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ,
ಮತ್ತು ಸಾಂಖ್ಯಿಕ ಸಚಿವರು